# ಪ್ರಸ್ತಾವನೆ

ಮಾರ್ಚ್ 2021ಕ್ಕೆ ಅಂತ್ಯಗೊಂಡಿರುವ ಸಾಲಿನ ಈ ವರದಿಯನ್ನು ಭಾರತದ ಸಂವಿಧಾನದ ಕಲಮು 151(2) ರ ಅಡಿಯಲ್ಲಿ ರಾಜ್ಯ ಶಾಸಕಾಂಗದ ಮುಂದೆ ಮಂಡಿಸುವ ಉದ್ದೇಶದಿಂದ ಕರ್ನಾಟಕದ ರಾಜ್ಯಪಾಲರಿಗೆ ಸಲ್ಲಿಸುವ ಸಲುವಾಗಿ ತಯಾರಿಸಲಾಗಿರುವುದು.

ಈ ವರದಿಯ ಭಾಗ-, ಮಹಿಳೆ ಮತ್ತು ಮಕ್ಕಳ ಆಭಿವೃದ್ಧಿ, ಕೃಷಿ, ಉನ್ನತ ಶಿಕ್ಷಣ, ಪಶುಸಂಗೋಪನೆ ಮತ್ತು ಪಶುವೈದ್ಯಕೀಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಮೂಹಗಳಡಿಯಲ್ಲಿನ ಕರ್ನಾಟಕ ಸರ್ಕಾರದ ಇಲಾಖೆಗಳ ಅನುಪಾಲನಾ ಲೆಕ್ಕಪರಿಶೋಧನೆಯ ಗಮನಾರ್ಹ ಫಲಿತಾಂಶಗಳನ್ನು ಒಳಗೊಂಡಿರುತ್ತದೆ.

ಈ ವರದಿಯ ಭಾಗ-,, ವಾಣಿಜ್ಯ ತೆರಿಗೆಗಳ ಇಲಾಖೆ ಮತ್ತು ಮುದ್ರಾಂಕಗಳು ಮತ್ತು ನೋಂದಣಿ ಇಲಾಖೆಗಳೂ ಸೇರಿದಂತೆ ರಾಜಸ್ವ ವಲಯದಡಿಯಲ್ಲಿನ ಕರ್ನಾಟಕ ಸರ್ಕಾರದ ಇಲಾಖೆಗಳ ಅನುಪಾಲನಾ ಲೆಕ್ಕಪರಿಶೋಧನೆಯ ಗಮನಾರ್ಹ ಫಲಿತಾಂಶಗಳನ್ನು ಒಳಗೊಂಡಿರುತ್ತದೆ.

ಈ ವರದಿಯಲ್ಲಿ ತಿಳಿಸಲಾಗಿರುವಂತಹ ದೃಷ್ಟಾಂತಗಳು 2020–21ರ ಅವಧಿಗೆ ಮಾಡಲಾದಂತಹ ಪರೀಕ್ಷಾ– ಪರಿಶೀಲನೆಯ ಸಮಯದಲ್ಲಿ ಗಮನಿಸಲಾದ ಅಂಶಗಳನ್ನೂ, ಅಲ್ಲದೆಯೇ ಹಿಂದಿನ ಸಾಲುಗಳಲ್ಲಿ ಗಮನಿಸಲಾಗಿದ್ದು, ಆದರೆ, ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಗಳಲ್ಲಿ ವರದಿ ಮಾಡಲು ಸಾದ್ಯವಾಗದವುಗಳಾಗಿರುತ್ತವೆ. 2020–21ರ ನಂತರದ ಅವಧಿಗೆ ಸಂಬಂಧಿಸಿದ ದೃಷ್ಟಾಂತಗಳನ್ನೂ ಸಹ ಎಲ್ಲೆಲ್ಲಿ ಅವಶ್ಯವಿದೆಯೋ ಅಂತಹ ಕಡೆಗಳಲ್ಲಿ ಸೇರಿಸಲಾಗಿದೆ.

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವಂತಹ ಲೆಕ್ಕಪರಿಶೋಧನಾ ಮಾನದಂಡಗಳ ಅನುಸಾರ ಲೆಕ್ಕಪರಿಶೋಧನೆಯನ್ನು ನಡೆಸಲಾಗಿದೆ.

ಭಾಷಾಂತರಿಸಿದ ಈ ಆವೃತ್ತಿಯಲ್ಲಿನ ಯಾವುದೇ ಸಂದೇಹಗಳಿಗೆ ಆಂಗ್ಲ ಭಾಷಾ ಆವೃತ್ತಿಯೇ ಅಧಿಕೃತವೆಂದು ಪರಿಗಣಿಸಬೇಕು.